<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ರಾಮೋಜಿಗೌಡ ಇವರ ಶೂನ್ಯ ವೇಳೆಯ ಪ್ರಶ್ನೆಗೆ ಸರ್ಕಾರದ ಉತ್ತರ</u>

<u>ವಿಷಯ:</u>

**ದಿನಾಂಕ: 11.03.2025, ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಕರಗ ಮಹೋತ್ಸವಕ್ಕೆ ವೈಟ್ ಟಾಪಿಂಗ್ ಅಡ್ಡಿ? ಎಂಬ ಶೀರ್ಷಿಕೆಯಲ್ಲಿ ಪ್ರಕಟಗೊಂಡಿರುವ ಬೆಂಗಳೂರು ಇತಿಹಾಸದಲ್ಲಿ ಕರಗಕ್ಕೆ ತನ್ನದೇ ಆದ ಮಹತ್ವ ಇದೆ. ಪ್ರತಿ ವರ್ಷ ಕೂಡ ಕರಗ ಸಂಭ್ರಮಕ್ಕೆ ಯಾವುದೇ ಧಕ್ಕೆಯಾಗದಂತೆ ಸಾಂಪ್ರದಾಯಕವಾಗಿ ಆಚರಣೆ ಮಾಡಲಾಗುತ್ತಿದೆ. ಆದರೆ ಈ ಬಾರಿ ಬಿಬಿಎಂಪಿ ಕೈಗೊಂಡಿರುವ ವೈಟ್‌ಟಾಪಿಂಗ್ ಕಾಮಗಾರಿಯಿಂದಾಗಿ ಕರಗ ಮಹೋತ್ಸವದ ಸಾಂಪ್ರದಾಯಗಳಿಗೆ ತೊಡಕಾಗುವ ಸಾಧ್ಯತೆಗಳಿವೆ. ನೂರಾರು ಗೊಂದಲಕ್ಕೆ ಕರಗ ಸಮಿತಿ ಸಿಲುಕಿದೆ.**

**ಎಸ್.ಪಿ. ರೋಡ್, ಧರ್ಮರಾಯ ದೇವಸ್ಥಾನದ ಬಳಿ ಕಳೆದ ಮೂರು ತಿಂಗಳಿಂದ ಒಳ ಚರಂಡಿ, ರಸ್ತೆ ಕಾಮಗಾರಿ ಆರಂಭಿಸಿದ ಬಿಬಿಎಂಪಿ ಇನ್ನು ಕೂಡ ಶೇಕಡ 10 ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲ. ಕರಗ ಮಹೋತ್ಸವವು ಏಪ್ರಿಲ್ 12 ರಂದು ನಡೆಯಲಿದ್ದು, ಕೇವಲ 25 ದಿನ ಬಾಕಿ ಇದ್ದು, ಮೂರು ತಿಂಗಳಲ್ಲಿ ಮುಗಿಯದ ಕೆಲಸ ಕೇವಲ 25 ದಿನದಲ್ಲಿ ಮುಗಿಯಲು ಸಾಧ್ಯವೇ? ಎಂದು ಪ್ರಶ್ನೆ ಕಾಡುತ್ತಿದೆ. ಲಕ್ಷಾಂತರ ಜನ ಸಂಭ್ರಮದಲ್ಲಿ ಸೇರುವ ಸಾಕಷ್ಟು ಅಪಾಯಗಳು ಈ ಮಾರ್ಗದಲ್ಲಿವೆ. ಅನೇಕ ಕಡೆ ರಸ್ತೆ ಉದ್ದಕ್ಕೂ ದೊಡ್ಡ ದೊಡ್ಡ ಗುಂಡಿಗಳನ್ನು ಅಗೆದಿರುವ ಕಾರಣ, ಬರುವವರು ಕತ್ತಲೆಯಲ್ಲಿ ಕೊಂಚ ಯಾಮಾರಿದರು ಅಪಾಯದ ಸಾಧ್ಯತೆ ಇದೆ. ಈ ವಿಷಯದ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಬೇಕಾಗಿರುವುದರಿಂದ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡುವ ಬಗ್ಗೆ.**

<u>ಉತ್ತರ:</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಯೋಜನಾ ಕೇಂದ್ರ ವತಿಯಿಂದ 2023-24ನೇ ಸಾಲಿನ ಸರ್ಕಾರದ ಅನುದಾನದಡಿಯಲ್ಲಿ ಪ್ಯಾಕೇಜ್-3 ರಲ್ಲಿ ಎಸ್.ಪಿ ರಸ್ತೆಯನ್ನು (ಎಸ್.ಜೆ.ಪಿ ರಸ್ತೆಯಿಂದ ಹಡ್ಸನ್ ವೃತ್ತದವರೆಗೆ) ವೈಟ್ ಟಾಪಿಂಗ್ ಅಳವಡಿಸಿ ಅಭಿವೃದ್ಧಿಪಡಿಸುವ ಯೋಜನೆಯನ್ನು ರೂ.5.00 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗುತ್ತಿರುತ್ತದೆ. ಸದರಿ ರಸ್ತೆಯು 380.00 ಮೀ. ಉದ್ದವಿದ್ದು, ಈಗಾಗಲೇ ಸದರಿ ರಸ್ತೆಯಲ್ಲಿ ಎಲ್ಲಾ ತರಹದ ಉಪಯುಕ್ತಗಳಾದ 300, 200 ಮತ್ತು 100 ಮಿ.ಮೀ. ವ್ಯಾಸದ DI ನೀರಿನ ಕೊಳವೆ ಮಾರ್ಗ, 300 ಮಿ.ಮೀ ಕಾಂಕ್ರೀಟ್ ಒಳಚರಂಡಿ ಕೊಳವೆಗಳು, 1000 ಮಿ.ಮೀ ಕಾಂಕ್ರೀಟ್ ಮಳೆ ನೀರಿನ ಚರಂಡಿ, ಚೇಂಬರ್‌ಗಳು ಹಾಗೂ ವಿದ್ಯುತ್ ಮತ್ತು ಓಎಫ್‌ಸಿ ಕೇಬಲ್‌ಗಳನ್ನು ಅಳವಡಿಸುವ ಸಲುವಾಗಿ 200 ಮಿ.ಮೀ. ಮತ್ತು 110 ಮಿ.ಮೀ., ವ್ಯಾಸದ DWC Pipes ಡಕ್ಟ್‌ಗಳನ್ನು ಅಳವಡಿಸಿಕೊಂಡು, ಸದರಿ ರಸ್ತೆಯಲ್ಲಿ ವೈಟ್ ಟಾಪಿಂಗ್ ಮಾಡಲು ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಲಾಗಿದ್ದು (ಪ್ರೊಫೈಲ್ ಕರೆಕ್ಷನ್) ವೈಟ್ ಟಾಪಿಂಗ್ ಅಳವಡಿಸುವ ಕಾಮಗಾರಿಯನ್ನು ಕರಗ ಮಹೋತ್ಸವದ ಮುನ್ನವೇ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ: ನಅಇ 142 ಎಂಎನ್‌ವೈ 20** (ಇ)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ